

بسم اللهِ الرّحمٰنِ الرّحيم

# ಜರ್ಮನ್ ಜಲ್ಸ ಸಾಲಾನ – ಅಲ್ಲಾಹನ ಅನುಗ್ರಹಗಳ ಸ್ಮರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**12-06-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೀವು ಪ್ರತಿಯೊಂದು ಸಮಯದಲ್ಲಿಯೂ ಅಲ್ಲಾಹನನ್ನು ಪ್ರಾರ್ಥಿಸುತ್ತಾ ಇರಬೇಕು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಆಜ್ಞಾಪಿಸಿದ ಹಾಗೆ- **ಅಮ್ಮಾ ಬಿ ನಿಅ್‌ಮತಿ ರಬ್ಬಿಕ ಫಹದ್ದಿಸ್** ಅಲ್ಲಾಹನು ದಯಪಾಲಿಸಿದ ಅನುಗ್ರಹಗಳನ್ನು ನೆನಪಿಸುತ್ತಾ ಇರಬೇಕು. ಇದರಿಂದ ಅಲ್ಲಾಹನ ಬಗ್ಗೆ ಪ್ರೀತಿ ವರ್ಧಿಸುತ್ತದೆ. ಅವನನ್ನು ಅನುಸರಿಸಲು ಮತ್ತು ಅವನ ಆಜ್ಞೆಗಳನ್ನು ಪಾಲಿಸಲು ಒಂದು ಉತ್ಸಾಹ ಉಂಟಾಗುತ್ತದೆ."

ಅಲ್ಲಾಹನು ನಮಗೆ ದಯಪಾಲಿಸುತ್ತಾ ಇರುವ ಅನುಗ್ರಹಗಳ ದೃಶ್ಯಗಳನ್ನು ನಾವು ಪ್ರತಿದಿನ ಕಾಣುತ್ತಾ ಇದ್ದೇವೆ. ನಾನು ಪ್ರಯಾಣದಲ್ಲಿರುವಾಗ ಅಲ್ಲಾಹನ ಅನುಗ್ರಹಗಳು ಹಲವು ಪಟ್ಟು ಹೆಚ್ಚಾಗುತ್ತವೆ. ಅಲ್ಲಾಹನು ತನ್ನ ಅನುಗ್ರಹದಿಂದ ಕಾರ್ಯಕ್ರಮಗಳಲ್ಲಿ ಅನುಗ್ರಹ ಸುರಿಯುತ್ತಾನೆ. ಇಸ್ಲಾಮಿನ ವಾಸ್ತವಿಕ ಸಂದೇಶ ಬಹಳ ಹೆಚ್ಚುಹೆಚ್ಚಾಗಿ ಜನರಿಗೆ ತಲಪುತ್ತದೆ. ಜನರ ಮೇಲೆ ಅದರ ಪ್ರಭಾವ ಸಹ ಉಂಟಾಗುತ್ತದೆ. ನಾನು ಜರ್ಮನಿಗೆ ಹೋದುದರ ಮುಖ್ಯ ಉದ್ದೇಶ ಜಲ್ಸ ಸಾಲಾನದಲ್ಲಿ ಭಾಗವಹಿಸುವುದಾಗಿತ್ತು. ಅದರೊಂದಿಗೆ ಅಲ್ಲಾಹನು ಎಂತಹ ಕಾರ್ಯಕ್ರಮ ನಡೆಸಲು ಸಂದರ್ಭ ಒದಗಿಸಿದನೆಂದರೆ ಇಸ್ಲಾಮಿನ ವಾಸ್ತವಿಕ ಪರಿಚಯ ಮತ್ತು ಅದರ ಉಪದೇಶಗಳು ಜನರಿಗೆ ತಲಪಿಸಲು ಸಾಧ್ಯವಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಮನುಷ್ಯನು ಪ್ರತಿಯೊಂದು ಸ್ಥಿತಿಯಲ್ಲಿ ಅಲ್ಲಾಹನಿಗೆ ಪ್ರಾರ್ಥನೆ ಸಲ್ಲಿಸುತ್ತಾ ಇರಬೇಕು. ಅದನ್ನು ಮಾಡದೆ ನಮ್ಮ ಒಂದು ಹೆಜ್ಜೆ ಸಹ ಎತ್ತುವುದು ಅಸಾಧ್ಯವಾಗುತ್ತದೆ. ಅಲ್ಲಾಹನೊಂದಿಗೆ ನಿಷ್ಠಾಪೂರ್ಣವಾಗಿ ಪ್ರಾರ್ಥಿಸಬೇಕು. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ನೀಡಲಿ.

ಪ್ರಾರ್ಥನೆಯ ಫಲವಾಗಿ ಅಲ್ಲಾಹನ ಅನುಗ್ರಹ ಉಂಟಾದಾಗ, ಅಥವಾ ಅಲ್ಲಾಹನೇ ತನ್ನ ಗುಣಗಳ ಪ್ರಕಾಶದ ಮೂಲಕ ತನ್ನ ಅನುಗ್ರಹಗಳನ್ನು ಅನೇಕ ಪಟ್ಟು ವರ್ಧಿಸಿ ದಯಪಾಲಿಸುತ್ತಿರುವಾಗ, ಅದು ನಮ್ಮ ಪ್ರಾರ್ಥನೆ ಮತ್ತು ಪ್ರಯತ್ನಗಳಿಗಿಂತ ಹೆಚ್ಚಾಗಿರುವಾಗ, ಅಲ್ಲಾಹನ ಅನುಗ್ರಹಗಳನ್ನು ನೆನಪಿಸುವುದು ಮತ್ತು ಅವುಗಳ ಬಗ್ಗೆ ಪ್ರಸ್ತಾಪಿಸುವುದು ಮೊದಲಿಗಿಂತ ಹೆಚ್ಚು ಆವಶ್ಯಕವಾಗಿದೆ. ಇದು ಸತ್ಯವಿಶ್ವಾಸಿಗಳ ಹೃದಯದಲ್ಲಿ ಅಲ್ಲಾಹನೊಂದಿಗೆ ಪ್ರೀತಿ ಉಂಟುಮಾಡುತ್ತದೆ. ಅವನನ್ನು ಅನುಸರಿಸಲು ಮತ್ತು ಅವನ ಆಜ್ಞೆಗಳನ್ನು ಪಾಲಿಸಲು ಒಂದು ಉತ್ಸಾಹ ಉಂಟಾಗುತ್ತದೆ. ಈ ರೀತಿ ಅಲ್ಲಾಹನ ಅನುಗ್ರಹಗಳು ಇನ್ನಷ್ಟು ಹೆಚ್ಚಿಗೆಯಾಗುತ್ತವೆ. ಜರ್ಮನಿಯ ಜಲ್ಸದಲ್ಲಿ ಮತ್ತು ಬೇರೆ ಕಾರ್ಯಕ್ರಮಗಳಲ್ಲಿ ಅಲ್ಲಾಹನ ಅನುಗ್ರಹ ಉಂಟಾದುವು. ಇಸ್ಲಾಮ್ ಮತ್ತು ಅಹ್ಮದಿಯ್ಯತ್ತಿನ ಸಂದೇಶ ಅಲ್ಲಾಹನ ಅನುಗ್ರಹದಿಂದ ದೇಶದ ವಿವಿಧ ಭಾಗಗಳಲ್ಲಿ ಹಬ್ಬಿದೆ, ಅಥವಾ ಅಲ್ಲಿಗೆ ತಲಪಿದೆ. ಅಲ್ಲಾಹನ ಈ ಅನುಗ್ರಹದ ಬಗ್ಗೆ ಪ್ರಸ್ತಾಪಿಸಬೇಕಾಗಿದೆ. ಮತ್ತು ವಿಶಿಷ್ಟವಾಗಿ ಜರ್ಮನಿಯ ಜಮಾಅತ್ ಬಹಳ ಹೆಚ್ಚು ಕೃತಜ್ಞತೆ ಸೂಚಿಸಬೇಕಾಗಿದೆ. ಈ ಅನುಗ್ರಹಗಳ ಬಗ್ಗೆ ಕೃತಜ್ಞತೆ ಅರ್ಪಿಸುತ್ತಾ ಅಲ್ಲಾಹನ ಸನ್ನಿಧಿಯಲ್ಲಿ ಇನ್ನಷ್ಟು ಹೆಚ್ಚು ಬಾಗಬೇಕಾಗಿದೆ. ಆ ಮೂಲಕ ಅಲ್ಲಾಹನ ಅನುಗ್ರಹ ಹೆಚ್ಚುತ್ತಾ ಹೋಗುವಂತಾಗುವುದು.

ಜನರ ಹೃದಯಗಳಿಗೆ ತಲಪುವುದು ಅಲ್ಲಾಹನ ಅನುಗ್ರಹವಿಲ್ಲದೆ ಸಾಧ್ಯವಾಗದು. ಅಲ್ಲಾಹನು ಇಚ್ಛಿಸದಿದ್ದರೆ ಯಾವುದೇ ಮನುಷ್ಯ ಇನ್ನೊಬ್ಬನ ಹೃದಯವನ್ನು ತಲಪಲಾರ. ಮನುಷ್ಯನು ಲಕ್ಷಗಟ್ಟಲೆ ಪ್ರಯತ್ನಿಸಿದರೂ ಅಲ್ಲಾಹನು ಇಚ್ಛಿಸದಿದ್ದರೆ ಯಾವುದೇ ಸಂದೇಶ ಪ್ರಭಾವ ಬೀರಲಾರದು. ಕೆಲವು ಸಾರಿ ಉತ್ಸಾಹ ಭರಿತ ಭಾಷಣಗಾರರ ಭಾಷಣಗಳು ಪ್ರಭಾವ ಬೀರುವುದಿಲ್ಲ. ಆದರೆ ಒಂದು ಸರಳ ಸಾಮಾನ್ಯ ಮಾತು ಪ್ರಭಾವಶಾಲಿಯಾಗುತ್ತದೆ. ಇದರ ದೃಶ್ಯಗಳನ್ನು ನಾವು ಜಲ್ಸದಲ್ಲಿ ಕಂಡೆವು. ಅಲ್ಲಿಗೆ ಆಗಮಿಸಿದ ಅನ್ಯರಾದ ಅತಿಥಿಗಳ ಅಭಿಪ್ರಾಯ ಪ್ರಕಟಣೆಗಳಿಂದ ಇದು ಬಹಿರಂಗಗೊಂಡಿತು. ಅದರ ಬಗ್ಗೆ ಈಗ ನಾನು ನಿಮ್ಮ ಮುಂದೆ ಸಂಕ್ಷಿಪ್ತವಾಗಿ ವಿವರಿಸುವೆನು. ಅಲ್ಲಾಹನ ಅನುಗ್ರಹದಿಂದ ಜರ್ಮನ್ ಜಲ್ಸಕ್ಕೆ ಪೂರ್ವ ಯುರೋಪಿಯನ್ ದೇಶಗಳಿಂದಲೂ ನೆರೆ ಹೊರೆಯ ದೇಶಗಳಿಂದಲೂ ಬಹಳ ಜನರು ಆಗಮಿಸಿದ್ದರು. ಅವರಲ್ಲಿ ಜಮಾಅತಿಗೆ ಸೇರದ ಜನರು ಮತ್ತು ಮುಸ್ಲಿಮೇತರರು ಸಹ ಇದ್ದರು. ಅವರು ಅಹ್ಮದಿಯರೊಂದಿಗಿರುವ ಅವರ ಸಂಪರ್ಕಗಳ ಕಾರಣ ಸತ್ಯವೇನೆಂದು ತಿಳಿಯಲು ಆಗಮಿಸುತ್ತಾರೆ. ಈ ಕಾಲಘಟ್ಟದ ಇಮಾಮರ ಗುಲಾಮರಿಂದ ಅವರು ಎಷ್ಟು ಪ್ರಭಾವಿತರಾಗುತ್ತಾರೆಂದರೆ ನಂತರ ಅವರು ಜಮಾಅತಿಗೆ ಸೇರುತ್ತಾರೆ. ಬೈಅತ್ ಮಾಡುತ್ತಾರೆ. ಇಂತಹ ಜನರೊಂದಿಗೆ ಸಂದರ್ಶನ ನಡೆಯಿತು. ಪ್ರಶ್ನೋತ್ತರಗಳು ಸಹ ನಡೆದುವು. ಕೆಲವರ ಅಭಿಪ್ರಾಯಗಳನ್ನು ಈಗ ನಾನು ನಿಮ್ಮ ಮುಂದೆ ಇರಿಸುತ್ತೇನೆ.

ಅಲ್ಬೇನಿಯಾ ದೇಶದಿಂದ ಹದಿನಾರು ಜನರು ಜಲ್ಸಕ್ಕೆ ಆಗಮಿಸಿದ್ದರು. ಇಬ್ಬರು ಜಲ್ಸದ ಕಾರ್ಯಕ್ರಮಗಳನ್ನು ನೋಡಿ ಬೈಅತ್ ಮಾಡಿದರು. ಎಡ್‌ವಿನ್ ಕ್ಸೇಪಾ ಎಂಬವರು ತನ್ನ ಪತ್ನಿಯೊಂದಿಗೆ ಆಗಮಿಸಿದ್ದರು. ಇಬ್ಬರೂ ನ್ಯಾಯಾಂಗ ವಿಭಾಗದಲ್ಲಿ ಕೆಲಸ ಮಾಡುತ್ತಾರೆ. ಎಡ್‌ವಿನ್ ಅಹ್ಮದಿಯಾಗಿದ್ದರು. ಅವರ ಪತ್ನಿ ಜಲ್ಸಕ್ಕೆ ಬರುವ ಮೊದಲು ಅಹ್ಮದಿಯಾಗಿರಲಿಲ್ಲ. ಜಲ್ಸದಲ್ಲಿ ಭಾಗವಹಿಸಿದ ನಂತರ ಸಂದರ್ಶನ ಮಾಡಿ ಬೈಅತ್ ಮಾಡಿದರು. ಅವರು

ಹೇಳುತ್ತಾರೆ- ಜಲ್ಸದ ಅನುಭವ ಅಸಾಧಾರಣವಾಗಿತ್ತು. ಪ್ರೀತಿ ಮತ್ತು ನಿಸ್ವಾರ್ಥ ಸೇವೆಯ ದೃಶ್ಯಗಳನ್ನು ನಾನು ಕಂಡೆನು.

ಇಬ್ರಾಹೀಮ್ ತುಡ್‌ಶಿಲಾ ಎಂಬವರು ಸಂದರ್ಶನ ವೇಳೆಯಲ್ಲಿ 'ನಾನು ಅಹ್ಮದಿಯಾಗುತ್ತೇನೆ' ಎಂದು ಹೇಳಿದರು. ಅನಂತರ ಅವರು ಬೈಅತ್ ಮಾಡಿದರು. ಅವರು ಹೇಳುತ್ತಾರೆ: 'ನಾನು ಬೈಅತ್ ಮಾಡಲು ತಡಮಾಡಿದೆ. ಈ ದಿನ ನಾನು ಪೂರ್ಣ ವಿಶ್ವಾಸದೊಂದಿಗೆ ಬೈಅತ್ ಮಾಡುತ್ತೇನೆ. ನನ್ನ ತೀರ್ಮಾನ ಬಹಳ ಸರಿಯಾಗಿದೆ.' ಅದೇ ರೀತಿ, ಮೆಸಿಡೋನಿಯಾ ದೇಶದಿಂದ ಆಗಮಿಸಿದ ಒಬ್ಬ ಅತಿಥಿ ಹೇಳಿದರು: ನಾನು ಈ ಜಲ್ಸದಲ್ಲಿ ಭಾಗವಹಿಸಿದ ನೆನಪಿನೊಂದಿಗೆ ಮರಳಿ ಹೋಗುತ್ತಿದ್ದೇನೆ. ಈ ಜಲ್ಸದ ವ್ಯವಸ್ಥೆ ಹೇಗಿತ್ತೆಂದರೆ ಇಂತಹ ವ್ಯವಸ್ಥೆ ಯಾವುದೇ ಸಂಸ್ಥೆಗೆ ಮಾಡಲು ಕಷ್ಟ ಸಾಧ್ಯ. ಒಂದು ದೊಡ್ಡ ದೇಶ ಸಹ ಇಂತಹ ಉನ್ನತ ಮಟ್ಟದ ವ್ಯವಸ್ಥೆ ಮಾಡಲು ಶಕ್ತವಾಗಲಾರದು ಎಂದು ನಾನು ಹೇಳುತ್ತೇನೆ. ಅಂತೆಯೇ ಮೆಸಿಡೋನಿಯಾದ ಇನ್ನೊಬ್ಬರು ಹೇಳಿದರು: ನಾನು ನನ್ನ ಜೀವಿತದಲ್ಲಿ ಮೊದಲನೆಯ ಸಲ ಇಷ್ಟು ಒಳ್ಳೆಯ ಜನರನ್ನು ಭೇಟಿಯಾದೆನು. ಇಲ್ಲಿ ನನಗೆ ದೊರೆತ ಇಸ್ಲಾಮಿನ ಸಂದೇಶ ಎಲ್ಲದಕ್ಕಿಂತಲೂ ಹೆಚ್ಚಿಗೆ ನನ್ನನ್ನು ಪ್ರಭಾವಿಸಿತು. ಮೆಸಿಡೋನಿಯಾದಿಂದಲೇ ಆಗಮಿಸಿದ ಇನ್ನೊಬ್ಬ ಅತಿಥಿ ಹೀಗೆಂದರು: ನಾನು ಜಲ್ಸದಲ್ಲಿ ಪ್ರಥಮ ಬಾರಿ ಭಾಗವಹಿಸಿದೆ. ನನಗೆ ಇಲ್ಲಿ ಎಲ್ಲವೂ ಹೊಸದಾಗಿತ್ತು. ಇಸ್ಲಾಮಿನಲ್ಲಿ ಇಂತಹ ಒಂದು ಜಮಾಅತ್ ಇರುವುದಾಗಿ ನನಗೆ ತಿಳಿದಿರಲಿಲ್ಲ ಎಂದು ಹೇಳಿದರು. ಮೆಸಿಡೋನಿಯಾದ ಡ್ರಾಗಾನ್ ಎಂಬವರು ಹೀಗೆ ಹೇಳಿದರು: ನನಗೆ ಮುಸ್ಲಿಮರೊಂದಿಗೆ ಇದೇ ಮೊದಲ ಬಾರಿಗೆ ಇಷ್ಟು ಸಮೀಪದ ಪರಿಚಯ ಆಗಿದೆ. ಇಸ್ಲಾಮಿನ ಉಪದೇಶಗಳ ಬಗ್ಗೆ ಭಾಷಣಗಳನ್ನು ಆಲಿಸಿದೆ. ಇಲ್ಲಿ ನಮ್ಮನ್ನು ಮುಸ್ಲಿಮರು ಹೇಗೆ ಸ್ವಾಗತಿಸಿದರೆಂದರೆ ನಾವು ಅವರಿಗೆ ಬಹಳ ಕಾಲದಿಂದ ಪರಿಚಿತರು ಎಂಬಂತೆ.

ಬೋಸ್ನಿಯಾ ದೇಶದ ಒಬ್ಬರು ಹೇಳಿದರು: ಅವರಿಗೆ ಜಮಾಅತಿನೊಂದಿಗೆ ಬಲಿಷ್ಠ ಸಂಬಂಧವಿರಲಿಲ್ಲ. ಅಹ್ಮದಿಯಾ ಜಮಾಅತಿನ ಇಮಾಮರನ್ನು ಭೇಟಿಯಾದ ನಂತರ ಅವರಲ್ಲಿ ಅಸಾಧಾರಣ ಬದಲಾವಣೆ ಉಂಟಾಯಿತು. ಅವರಿಗೆ ಜಮಾಅತ್ ಬಗ್ಗೆ ಮತ್ತು ವಿಶಿಷ್ಟವಾಗಿ ಖಲೀಫತುಲ್ ಮಸೀಹರ ಬಗ್ಗೆ ಹೃತ್ಪೂರ್ವಕ ಗೌರವ ಉಂಟಾಯಿತು.

ಕ್ರೊವೇಶಿಯಾ ದೇಶದ ಪ್ರತಿನಿಧಿ ಸಂಘದ ಜೋಸಿಪಾ ಎಂಬವರು ಹೀಗೆ ಹೇಳಿದರು: "ಜಲ್ಸಕ್ಕೆ ಆಗಮಿಸುವ ಮೊದಲು ಈಗಿನ ಖಲೀಫರ **'ವರ್ಲ್ಡ್ ಕ್ರೈಸಿಸ್ ಎಂಡ್ ಪಾಥ್‌ವೇ ಟು ಪೀಸ್'** ಎಂಬ ಪುಸ್ತಕ ಓದಿದೆ. 2014, 2015ರ ಪೀಸ್ ಸಿಂಪೋಸಿಯಂನಲ್ಲಿ ಖಲೀಫತುಲ್ ಮಸೀಹರ ಭಾಷಣಗಳನ್ನು ಸಹ ಓದಿದೆ. ಜಮಾಅತಿನ ಖಲೀಫರು ಕೆಲವು ವಿಷಯಗಳ ಬಗ್ಗೆ ಕಠಿಣ ನಿಲುವು ಹೊಂದಿರಬಹುದು ಎಂದು ನಾನು ಯೋಚಿಸಿದ್ದೆ. ಆದರೆ, ಅವರನ್ನು ಬೇಟಿಯಾದ ನಂತರ ನನ್ನ ಭಾವನೆ ಬದಲಾಯಿತು." ಅವರು ಈಗ ಜಮಾಅತ್ ಬಗ್ಗೆ ಹೆಚ್ಚು ಅಧ್ಯಯನ ಮಾಡಲು ಪ್ರಾರಂಭಿಸಿದ್ದಾರೆ.

ಹಂಗೆರಿ ದೇಶದ ಮೆರ್ಝುಯಿ ಎಂಬವರು ಜಲ್ಸಕ್ಕೆ ಬಂದಿದ್ದರು. ಅವರು ಪೋಲೀಸು ಇಲಾಖೆಯ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದವರಾಗಿದ್ದಾರೆ. ಅವರು ಕ್ರೈಸ್ತ ಧರ್ಮದವರು. ಅವರು ಹೀಗೆ ಹೇಳಿದರು: "ಚಿಕ್ಕವರು ದೊಡ್ಡವರು ಪ್ರತಿಯೊಬ್ಬರು ಪರಸ್ಪರ ಸಲಾಮ್ ಹೇಳುತ್ತಾರೆ. ಪ್ರೀತಿಯಿಂದ ಭೇಟಿಯಾಗುತ್ತಾರೆ. ಈ ಜನರ ಭಾಷೆ ನನಗೆ ತಿಳಿಯದಿದ್ದರೂ ಅವರ ಮುಖ ಭಾವದಿಂದ ಅವರು ಪ್ರೀತಿಯನ್ನು ಹಂಚುತ್ತಿದ್ದಾರೆಂದು ತಿಳಿಯಿತು. ನಾನು ಪೂರ್ವದಲ್ಲಾಗಲಿ ಪಶ್ಚಿಮದಲ್ಲಾಗಲಿ ಇಂತಹ ದೃಶ್ಯ ಕಂಡಿಲ್ಲ." ಅದೇ ರೀತಿ, ಹಂಗೆರಿಯ ಇನ್ನೊಬ್ಬ ಅತಿಥಿ ಗಾಬೊರ್ ಪೀಟರ್ ಎಂಬವರು ಬಂದಿದ್ದರು. ಅವರು ಯಹೂದಿ ಧರ್ಮದವರು. ಅವರು ಹಿಂದೆ ಒರಟು ಸ್ವಭಾವದವರಾಗಿದ್ದರು. ಅವರು ನನ್ನನ್ನು ಕಂಡಾಗ ಹೇಳಿದರು: ಹಂಗೆರಿಯಲ್ಲಿ ಜಮಾಅತಿಗೆ ಯಾವುದಾದರೂ ಆವಶ್ಯಕತೆ ಇದ್ದರೆ ಯಾವುದೇ ವಿಷಯಕ್ಕೆ ಸಂಬಂಧಿಸಿ ಸಹಾಯ ಮಾಡಲು ನಾನು ಸಿದ್ಧನಾಗಿದ್ದೇನೆ ಎಂದು. ಈ ಬದಲಾವಣೆಗಳನ್ನು ಅಲ್ಲಾಹನೇ ಉಂಟು ಮಾಡಿದುದಾಗಿದೆ.

ಮತ್ತೆ ಜರ್ಮನಿಯ ಸುಲೈಮಾನ್ ಸಾಹೇಬರು. ಅವರು ಮೂಲತಃ ಸೆಂಟ್ರಲ್ ರಿಪಬ್ಲಿಕ್ ಆಫ್ ಆಫ್ರಿಕಾ ದೇಶದವರು. ಅವರು ಹೇಳುತ್ತಾರೆ: "ನನಗೆ ಜಲ್ಸದ ಆಹ್ವಾನ ಪತ್ರಿಕೆ ದೊರೆತಾಗ ನಾನು ಹೀಗೆ ಭಾವಿಸಿದೆ. ಐವತ್ತು ಅಥವಾ ನೂರು ಜನರ ಒಂದು ಪ್ರಚಾರ ಸಭೆ ಇರಬಹುದು. ಅದರಲ್ಲಿ ಕೆಲವು ಭಾಷಣಗಳು ಹಾಗೂ ಊಟ ಪಾನೀಯಗಳಿರಬಹುದು. ಅನಂತರ ಎಲ್ಲರೂ ಮನೆಗೆ ಹೋಗುವರು ಎಂದು ನಾನು ಭಾವಿಸಿದ್ದೆ. ಆದರೆ, ನಾನು ಇಲ್ಲಿಗೆ ಆಗಮಿಸಿದಾಗ ನನ್ನ ಅಭಿಪ್ರಾಯ ಸಂಪೂರ್ಣ ಬದಲಾವಣೆ ಗೊಂಡಿತು. ಸಾವಿರಗಟ್ಟಲೆ ಜನರು ಜಮಾಯಿಸಿದ್ದರು. ಜಲ್ಸದ ಮಾಂತ್ರಿಕತೆಯಿಂದ ನನಗೆ ಹೊರಗೆ ಬರಲಾಗಲಿಲ್ಲ. ಇಲ್ಲಿನ ಪ್ರತಿಯೊಂದೂ ಮಾಂತ್ರಿಕವಾಗಿದೆ. ನೀವು ಪ್ರಚಾರ ಮಾಡುವ ರೀತಿ ಅಪ್ರತಿಮವಾಗಿದೆ. ಈ ರೀತಿ ಪ್ರಚಾರ ಮಾಡಿದರೆ ದುರದೃಷ್ಟಶಾಲಿಯಾದವನು ಮಾತ್ರ ಅದನ್ನು ನಿರಾಕರಿಸುವನು."

ಮೋಂಟೆನಿಗ್ರೋದಿಂದ ಆಗಮಿಸಿದ ರಾಗಿಪ್ ಶಪ್ತಫಿ ಎಂಬವರು ಹೇಳಿದರು: "ನಾನು ಭಾಷಣಗಳನ್ನು ಆಲಿಸಿದೆ. ವ್ಯವಸ್ಥೆಗಳನ್ನು ನೋಡಿದೆ. ಇವು ಅಸಾಮಾನ್ಯವಾಗಿವೆ. ಮೋಂಟೆನೀಗ್ರೋದಲ್ಲಿ ಮುಸ್ಲಿಮರ ಮಧ್ಯೆ ಹೀಗೆ ಪ್ರಚಾರ ಮಾಡಲಾಗುತ್ತಿದೆ. ಅಹ್ಮದಿಯಾ ಜಮಾಅತ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬುವುದಿಲ್ಲವೆಂದು. ಆದರೆ ಈ ಜಮಾಅತನ್ನು ಸಮೀಪದಿಂದ ನೋಡುವವರಿಗೆ ಕೂಡಲೆ ತಿಳಿಯುತ್ತದೆ ಅದು ಮೌಲವಿಗಳು ಮಾಡುವ ಸುಳ್ಳು ಪ್ರಚಾರ ಎಂದು."

ಅದೇ ರೀತಿ ಬೆಲ್ಜಿಯಂನಲ್ಲಿ ಈಗ ವಾಸಿಸುತ್ತಿರುವ ಬೆಲ್ಜಿಯಂನವರಾದ ಒಬ್ಬರು ಹೇಳುತ್ತಾರೆ: ನಾನು ನನ್ನ ಭಾವನೆಗಳನ್ನು ವಿವರಿಸಲಾರೆ. ಇಲ್ಲಿನ ಆಧ್ಯಾತ್ಮಿಕ ದೃಶ್ಯ ನನ್ನ ಆತ್ಮವನ್ನು ತಳಸ್ಪರ್ಶಿಯಾಗಿ ಪ್ರಭಾವಿಸಿದೆ. ಇಸ್ಲಾಮ್ ಧರ್ಮದ ಸರಿಯಾದ ಚಿತ್ರ ನಾನು ಇಲ್ಲಿ ಕಂಡೆನು.

ಒಬ್ಬ ಜರ್ಮನ್ ಅತಿಥಿ ಹೇಳುತ್ತಾರೆ: "ನನಗೆ ಅಹ್ಮದಿಯತ್ ಬಗ್ಗೆ ತಿಳಿಯಲು ಸಾಧ್ಯವಾದ ಪ್ರಥಮ ಸಂದರ್ಭ ಇದಾಗಿದೆ. ಖಲೀಫರು ಹೇಳಿದುದು ಸತ್ಯವಾಗಿದೆ. ಅವರು

ಹೇಳಿದ ಹಾಗೆ ಲೋಕವು ವರ್ತಿಸಲು ಪ್ರಾರಂಭಿಸಿದರೆ ಲೋಕದಲ್ಲಿ ಶಾಂತಿ ಹಬ್ಬುವುದು.''

ಫ್ರಾನ್ಸ್‌ನಲ್ಲಿ ಹೊಸದಾಗಿ ಬೈಅತ್ ಮಾಡಿದ ಒಬ್ಬರಾದ ಹಾನ್ಲಿ ಅನ್‌ಫಾನ್ ಹೇಳುತ್ತಾರೆ: ನಾನು ಮುಸ್ಲಿಮನಾಗಿದ್ದೆ. ಆದರೆ ನನಗೆ ಸ್ಥಿರತೆ ಇರಲಿಲ್ಲ. ನಿನ್ನೆ ನಾನು ಖಲೀಫತುಲ್ ಮಸೀಹರ ಹಿಂದೆ ನಿಂತು ಜುಮುಅ ನಮಾಝ್ ಅನುಷ್ಠಿಸಿದಾಗ ನನಗೆ ಬಹಳ ನೆಮ್ಮದಿ ದೊರಕಿತು. ಜೀವನದಲ್ಲಿ ಪ್ರಥಮ ಬಾರಿ ನಮಾಝ್ ಮಾಡುವಾಗ ನಾನು ಅತ್ತೆನು.

ಒಬ್ಬ ವಿದ್ಯಾರ್ಥಿ ಎಡ್‌ಗ್ರೋಸ್ ಹೇಳುತ್ತಾರೆ: ಇಲ್ಲಿಗೆ ಬರುವುದಕ್ಕೆ ಮೊದಲು ಇಸ್ಲಾಮ್ ಬಗ್ಗೆ ನನಗೆ ಬಹಳ ಕೆಟ್ಟ ಅಭಿಪ್ರಾಯವಿತ್ತು. ಇಲ್ಲಿನ ಭಾಷಣಗಳನ್ನು ಆಲಿಸಿ ಕಾರ್ಯಕ್ರಮಗಳನ್ನು ಕಂಡಾಗ ಎಲ್ಲವೂ ವಿಭಿನ್ನ ಎಂದು ಕಾಣಿಸಿತು. ಜನರು ಬಹಳ ಚೆನ್ನಾಗಿ ವರ್ತಿಸುತ್ತಿದ್ದರು. ವಾಸ್ತವಿಕ ಇಸ್ಲಾಮನ್ನು ನಾನು ನಿಮ್ಮ ಮುಖಗಳಲ್ಲಿ ಕಾಣುತ್ತಿದ್ದೇನೆ.

ಲಿಥ್‌ವೇನಿಯಾ ದೇಶದ ಒಬ್ಬ ವಕೀಲರು ಹೇಳಿದರು: ನಾನು ಜಲ್ಸದಲ್ಲಿ ಭಾಗವಹಿಸಿ ಬಹಳ ಪ್ರಭಾವಿತನಾಗಿದ್ದೇನೆ. ನಾನು ನಿಮ್ಮ ಖಲೀಫರ ಭಾಷಣಗಳನ್ನು ಆಲಿಸಿದೆ. ಇಸ್ಲಾಮ್ ಬಗ್ಗೆ ಇದು ನನಗೆ ಹೊಸ ಅನುಭವವಾಗಿದೆ. ಇಲ್ಲಿಗೆ ಬಂದು ಇಸ್ಲಾಮಿನ ವಾಸ್ತವಿಕ ಉಪದೇಶಗಳು ತಿಳಿದುವು.

ಬೋಸ್ನಿಯಾ ದೇಶದ ಒಬ್ಬರು ಹೇಳಿದರು: ಖಲೀಫತುಲ್ ಮಸೀಹ್ ಒಬ್ಬ ಜೀವಂತ ದೇವನ ಬಗ್ಗೆ ವಿವರಿಸಿದರು. ದೇವನು ಈಗಲೂ ಜೀವಂತವಾಗಿದ್ದಾನೆಂದು ವಾದಿಸುವ ಮತ್ತು ತೋರಿಸಿ ಕೊಡುವ ಏಕಮಾತ್ರ ಜಮಾಅತ್ ಅಹ್ಮದಿಯಾ ಜಮಾಅತಾಗಿದೆ ಎಂದು ಹೇಳಿದರು. ಅದೇ ರೀತಿ ಜರ್ಮನಿ ಮತ್ತು ಬೆಲ್ಜಿಯಮ್ ದೇಶದ ಗಡಿಯಲ್ಲಿ ವಾಸಿಸುವ ಮುಸ್ಲಿಮನಾದ ಒಬ್ಬರು ಹೇಳಿದರು: ನಾನು ಜಲ್ಸದಲ್ಲಿ ಭಾಗವಹಿಸುವ ಮೊದಲು ಧರ್ಮ ಮತ್ತು ಜಮಾಅತ್ ಬಗ್ಗೆ ಲಕ್ಷ್ಯ ನೀಡಿರಲಿಲ್ಲ. ಆದರೆ ಜಲ್ಸದಲ್ಲಿ ಭಾಗವಹಿಸಿದ ನಂತರ ನನ್ನ ಭಾವನೆಗಳು ಬದಲಾವಣೆಗೊಂಡವು. ಮತ್ತು ಸಿರಿಯಾ ದೇಶದ ಒಬ್ಬರು. ಅವರ ಹೆಸರು ಅಬ್ದುಲ್ಲ ಎಂದು. ಅವರ ಪಿತ ಹಲವು ವರ್ಷಗಳಿಂದ ಅಹ್ಮದಿಯರಾಗಿದ್ದರು. ಅವರು ತನ್ನ ತಂದೆಯೊಂದಿಗೆ ರಶ್ಯದಲ್ಲಿ ವಾಸಿಸುತ್ತಿದ್ದರು. ಈಗ ವಿದ್ಯಾಭ್ಯಾಸಕ್ಕೋಸ್ಕರ ಹಾಲೆಂಡಿನಲ್ಲಿದ್ದಾರೆ. ಅವರ ಪಿತ ಅವರಿಗೆ ತಬ್ಲೀಗ್ ಮಾಡಿದ್ದರು. ಆದರೆ ಅವರು ಬೈಅತ್ ಮಾಡಲಿಲ್ಲ. ಜಲ್ಸದಲ್ಲಿ ಭಾಗವಹಿಸಿದ ನಂತರ ಹೇಳಿದರು, ನಾನು ಬೈಅತ್ ಮಾಡುತ್ತೇನೆ ಎಂದು. ಅವರು ಹೇಳುತ್ತಾರೆ– ''ಅಲ್ಲಾಹನು ನನಗೆ ದೃಷ್ಟಾಂತ ತೋರಿಸಿರುವನು. ನಾನು ರಾತ್ರಿ ಬಹಳ ವಿನಯಾನ್ವಿತನಾಗಿ ಪ್ರಾರ್ಥಿಸಿದೆ. ನಾನು ನಿದ್ರೆಯಲ್ಲಿ ಒಂದು ಸ್ವಪ್ನ ಕಂಡೆನು. ಒಂದು ದೊಡ್ಡ ಗೋಡೆಯಲ್ಲಿ ಅಲ್ ಅಹ್ಮದಿಯಾ ಎಂದು ಪ್ರಕಾಶಮಾನವಾಗಿ ಬರೆದಿದೆ. ಅದರಿಂದ ಅಸಾಧಾರಣ ಪ್ರಕಾಶ ಹೊರ ಹೊಮ್ಮುತ್ತಿದೆ. ಜಲ್ಸದಲ್ಲಿ ಖಲೀಫತುಲ್ ಮಸೀಹ್ ಭಾಷಣ ಮಾಡುತ್ತಿದ್ದಾಗ ನನ್ನ ಹೃದಯದಲ್ಲಿ ಒಂದು ಆಶೆ ಉದ್ಭವಿಸಿತು. ನಾನು ಖಲೀಫತುಲ್ ಮಸೀಹರ ಸಮೀಪ ನಿಲ್ಲುವ ಸಂದರ್ಭ ನನಗೆ ಸಿಗುತ್ತಿದ್ದರೆ ಚೆನ್ನಾಗಿತ್ತು ಎಂದು. ಆಗ ಒಂದು ಕ್ಷಣಕಾಲ ನನಗೆ ಪ್ರಜ್ಞಾಶೂನ್ಯ ಅವಸ್ಥೆ ಉಂಟಾಯಿತು. ನಾನು ಖಲೀಫತುಲ್ ಮಸೀಹರ ಬದಿಯಲ್ಲಿ ನಿಂತುಕೊಂಡಿರುವುದಾಗಿ ಕಂಡೆನು. ಅನಂತರ ನನ್ನ ಹೃದಯ ತೆರೆಯಿತು.'' ಹಾಗೆ ಅವರು ಬೈಅತ್ ಮಾಡಿದರು.

ಅಲ್‌ಜೀರಿಯಾ ದೇಶದ ಒಬ್ಬರು ಹೇಳುತ್ತಾರೆ: ನಾನು ಪ್ರತಿ ಬಾರಿ ಜಲ್ಸದಲ್ಲಿ ಬಂದು ಸೇರುವಾಗ ನನ್ನ ವಿಶ್ವಾಸ ಅಸಾಮಾನ್ಯವಾಗಿ ವರ್ಧಿಸುತ್ತದೆ. ನಾನು ಅಲ್ಲಾಹನ ಅಮೂಲ್ಯ ಸಹಾಯದ ದೃಶ್ಯಗಳನ್ನು ಕಾಣುತ್ತೇನೆ. ನಾನು ಸ್ವರ್ಗದಲ್ಲಿದ್ದೇನೋ ಎಂಬಂತೆ ನನಗೆ ಭಾಸವಾಗುತ್ತದೆ. **ತಹ್‌ಯತುಹುಮ್ ಫೀಹಾ ಸಲಾಮ** (ಅಲ್ಲಿ ಅವರ ಅಭಿವಂದನೆ ''ಸಲಾಮ್'' ಎಂದಾಗಿರುತ್ತದೆ) ಎಂಬುದನ್ನು ನನಗೆ ನೆನಪಿಸಿ ಕೊಡುತ್ತದೆ.

ಇಟಲಿ ದೇಶದಲ್ಲಿ **'ರಿಲೀಜಿಯನ್ ಫೋರ್ ಪೀಸ್'** ಎಂಬ ಸಂಸ್ಥೆ ಇದೆ. ಅದರ ಜನರಲ್ ಸೆಕ್ರಟರಿ ವ್ಯಾಟಿಕನ್ ಸಿಟಿ (ಪೋಪರ ಕೇಂದ್ರದಲ್ಲಿ) ಬಹಳ ಪ್ರಭಾವ ಹೊಂದಿದ್ದಾರೆ. ಅವರು ಇಟಲಿಗೆ ಮರಳಿದ ನಂತರ ತನ್ನ ಪತ್ರಿಕೆಯಲ್ಲಿ ಲೇಖನ ಬರೆದಿದ್ದಾರೆ. ಆ ಪತ್ರಿಕೆಗೆ ಸಾವಿರಗಟ್ಟಲೆ ಓದುಗರಿದ್ದಾರೆ. ಅವರು ಹೀಗೆ ಬರೆದರು: ಜಲ್ಸ ಸಾಲಾನದ ದೃಶ್ಯ ಆಶ್ಚರ್ಯಕರವಾಗಿತ್ತು ಎಂದು ನಾನು ಅಂಗೀಕರಿಸಬೇಕಾಯಿತು ಎಂದು.

ಸಿರಿಯಾ ದೇಶದ ಒಬ್ಬ ಡಾಕ್ಟರ್ ಜಲ್ಸಕ್ಕೆ ಆಗಮಿಸಿದ್ದರು. ಅವರು ಹೇಳುತ್ತಾರೆ: ಇಷ್ಟು ಅಚ್ಚುಕಟ್ಟಾದ ವ್ಯವಸ್ಥೆ ನಾನು ನನ್ನ ಜೀವಿತದಲ್ಲಿ ಎಂದೂ ಕಂಡಿಲ್ಲ. ನಮಗೆ ಆರು ಜನರನ್ನು ನಿಭಾಯಿಸಲು ಆಗುವುದಿಲ್ಲ. ಇಲ್ಲಿ ನಲ್ವತ್ತು ಸಾವಿರದಷ್ಟು ಜನರು ಜಮಾಯಿಸಿದ್ದಾರೆ. ಇಲ್ಲಿ ಯಾವುದೇ ನೂಕು ನುಗ್ಗಲು ಇರಲಿಲ್ಲ. ನಾನು ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ಮತ್ತು ಖಲೀಫರನ್ನು ಗೌರವ ಭಾವದಿಂದ ಕಾಣುತ್ತೇನೆ. ನಾನು **'ಬರಾಹೀನೆ ಅಹ್ಮದಿಯಾ'** ಪೂರ್ಣವಾಗಿ ಓದಿದ್ದೇನೆ. ಅಲ್ಲಾಹನಾಣೆ, ಹತ್ತೊಂಬತ್ತನೆಯ ಶತಮಾನದಲ್ಲಿ ಇಸ್ಲಾಮಿನ ವಿರೋಧಿಗಳನ್ನು ಪ್ರತಿರೋಧಿಸಲು ಇಂತಹ ಬೇರೆ ಯಾವುದೇ ಗ್ರಂಥ ಅರಬ್ ದೇಶದಲ್ಲಾಗಲೀ ಬೇರೆ ಯಾವ ದೇಶದಲ್ಲಾಗಲೀ ಬರೆಯಲ್ಪಟ್ಟಿಲ್ಲ. ಅಲ್ಲಾಹನು ಅವರ ಹೃದಯವನ್ನು ತೆರೆಯಲಿ ಮತ್ತು ಅವರಿಗೆ ಸತ್ಯವನ್ನು ಅಂಗೀಕರಿಸುವ ಭಾಗ್ಯ ದೊರಕಲಿ.

ಅಲ್ಲಾಹನ ಅನುಗ್ರಹದಿಂದ ಅಸಾಮಾನ್ಯ ಪ್ರಭಾವಗಳು ಉಂಟಾಗಿವೆ. ನಾನು ಕೆಲವು ಅಭಿಪ್ರಾಯಗಳನ್ನು ಮಾತ್ರ ವಿವರಿಸಿರುವೆನು. ಅದು ಸಹ ಸಂಕ್ಷಿಪ್ತವಾಗಿ. ಜಲ್ಸದ ಅನುಗ್ರಹಗಳು ಅಸಾಧಾರಣವಾಗಿರುತ್ತವೆ. ಕೆಲವು ವಿಷಯಗಳ ಬಗ್ಗೆ ಲಕ್ಷ್ಯ ನೀಡಬೇಕಾಗಿರುತ್ತದೆ. ಅತಿಥಿಗಳು ಅಂತಹ ವಿಷಯದ ಬಗ್ಗೆ ಹೇಳಲು ಹಿಂಜರಿಯುತ್ತಾರೆ. ಆದರೆ ಅಲ್‌ಬೇನಿಯಾ ದೇಶದ ಒಬ್ಬ ಮಹಿಳೆ ಕೆಲವು ವಿಷಯಗಳ ಬಗ್ಗೆ ಗಮನ ಸೆಳೆದರು. ಅವರು ಹೀಗೆ ಹೇಳಿದರು: ಇಲ್ಲಿ ರೊಟ್ಟಿ ಮತ್ತು ಸಾರು ಬಹಳ ಹೆಚ್ಚು ಹಾಳು ಮಾಡಲಾಗುತ್ತಿದೆ ಎಂದು. ಜಲ್ಸದಲ್ಲಿ ಬಹಳ ಉತ್ತಮ ಕೆಲಸಗಳು ನಡೆಯುತ್ತಿದೆ. ಆದರೆ ತಪ್ಪುಗಳ ಬಗ್ಗೆ ಗಮನ ಹರಿಸಬೇಕು. ಜರ್ಮನಿಯ **ಲಜ್**ನ ಇದರ ಬಗ್ಗೆ ಗಮನ ಹರಿಸಬೇಕು. ರೊಟ್ಟಿ ಮತ್ತು ಸಾರು ಪೋಲು ಮಾಡಬೇಡಿರಿ ಎಂದು ಹೇಳುತ್ತಾ ಇರಬೇಕು.

ಮೆಸಿಡೋನಿಯಾದ ಒಬ್ಬ ಮಹಿಳೆ ಹೇಳಿದರು: ನಮಗೆ ವಾಸ ಸ್ಥಳ ಬಹಳ ದೂರದಲ್ಲಿತ್ತು. ನಾವು ಬಹಳ ದೂರದಿಂದ ಜಲ್ಸಕ್ಕೆ ಬರುವಾಗ ತುಂಬಾ ಆಯಾಸವಾಗುತ್ತದೆ. ಇಂತಹ

ಜನರಿಗೆ ಸಮೀಪದಲ್ಲಿ ವಾಸದ ವ್ಯವಸ್ಥೆ ಮಾಡಲು ಜರ್ಮನಿಯ ಜಮಾಅತ್ ಪ್ರಯತ್ನಿಸಬೇಕು.

(ಅನಂತರ ಹುಝೂರ್, ಜರ್ಮನಿಯ ಎರಡು ನಗರಗಳಲ್ಲಿ ಹೊಸದಾಗಿ ನಿರ್ಮಿಸಿದ ಮಸ್‌ಜಿದ್‌ಗಳ ಉದ್ಘಾಟನೆ ಬಗ್ಗೆ ವಿವರಿಸಿ ಅದರಲ್ಲಿ ಭಾಗವಹಿಸಿದ ಅಹ್ಮದಿಯೇತರ ಮುಸ್ಲಿಮ್ ಗಣ್ಯರ ಅಭಿಪ್ರಾಯಗಳನ್ನು ಪ್ರಸ್ತಾಪಿಸಿದರು.)

ಜರ್ಮನಿಯ ಜಲ್ಸ ಸಾಲಾನದ ಅಧಿಕಾರಿಗಳು ಕೆಲವು ವಿಷಯಗಳನ್ನು ಗಮನಿಸಿ ಗುರುತಿಸಿಕೊಂಡಿದ್ದಾರೆ. ಹೀಗೆ ಮಾಡುವುದರಿಂದ ಮುಂದೆ ಸುಧಾರಣೆ ಮಾಡಲು ಸಾಧ್ಯವಾಗುತ್ತದೆ. ಮತ್ತೊಂದು ವಿಷಯ, ಜನರು ಮಾಲಿನ್ಯ ಎಸೆಯುತ್ತಿದ್ದಾರೆ. ಅವರು ಸ್ವಚ್ಛತೆ ಬಗ್ಗೆ ಗಮನ ಹರಿಸುವುದಿಲ್ಲ. ಮುಂದೆ ಇದರ ಬಗ್ಗೆ ಗಮನ ಹರಿಸಬೇಕು ಸ್ವಚ್ಛತೆ ಕಾಪಾಡಲು ಹೇಳುತ್ತಾ ಇರಬೇಕು. ಒಬ್ಬನು ಇನ್ನೊಬ್ಬನಿಗೆ ಇದರ ಬಗ್ಗೆ ಹೇಳುತ್ತಾ ಇರಬೇಕು.

ಇನ್ನೊಂದು ವಿಷಯ ಆಹಾರದ ಬಗ್ಗೆಯಾಗಿದೆ. ಲಂಗರ್ ಖಾನದಲ್ಲಿ ಒಂದೇ ರೀತಿಯ ಆಹಾರ ಸಿದ್ಧಪಡಿಸಲಾಗುತ್ತಿದೆ. ಪಾಸ್ತ ಮೊದಲಾದುವು ಒದಗಿಸಬೇಕು ಎಂದು ಕೆಲವರು ಹೇಳುತ್ತಾರೆ. ಆದರೆ ಇಲ್ಲಿನ ಆಧ್ಯಾತ್ಮಿಕ ಆಹಾರ ತಿನ್ನಲು ಅಹ್ಮದಿಯರು ಇಲ್ಲಿಗೆ ಆಗಮಿಸುತ್ತಾರೆ. ಇಂತಹ ಮಾತು ಹೇಳಬಾರದು. ಇಲ್ಲಿ ಯಾವ ಆಹಾರ ಲಭಿಸುತ್ತದೆಯೋ ಅದನ್ನು ತಿನ್ನಬೇಕು. ಒಂದೇ ರೀತಿಯ ಆಹಾರ ಪಾಕ ಮಾಡಲಾಗುವುದು.

ಕೆಲವು ಸಾರಿ ಕೆಲವು ಕಾರ್ಯಕರ್ತರು ಕೆಲವು ವಿಷಯಗಳ ಬಗ್ಗೆ ಕಠಿಣವಾಗಿ ವರ್ತಿಸುತ್ತಾರೆ. ಅದರ ಪರಿಣಾಮವಾಗಿ ಕೆಲವರಿಗೆ ಕಷ್ಟವಾಗುತ್ತದೆ. ಆದುದರಿಂದ ಯಾರಿಗಾದರೂ ವಾಸ್ತವಿಕವಾಗಿ ಆವಶ್ಯಕತೆ ಇದ್ದರೆ ನಿಯಮಗಳನ್ನು ಮೀರಿಯಾದರೂ ಅವರ ಆವಶ್ಯಕತೆ ಈಡೇರಿಸಲು ಸಾಧ್ಯವಿದ್ದರೆ ಈಡೇರಿಸಬೇಕು. ಕಾರ್ಯಕರ್ತರು ಯಾವಾಗಲೂ ಮೃದುವಾಗಿ ವರ್ತಿಸಬೇಕು.

ಒಟ್ಟಾರೆ ಈ ಜಲ್ಸ ಸಾಲಾನದ ವ್ಯವಸ್ಥೆ ಬಹಳ ಚೆನ್ನಾಗಿತ್ತು. ಅಫ್‌ಸರ್ ಜಲ್ಸ ಸಾಲಾನ ಮತ್ತು ಅವರ ಸಹಾಯಕರು ಈ ವರ್ಷ ಹಿಂದಿನ ವರ್ಷಗಳಿಗಿಂತ ಉತ್ತಮ ಕೆಲಸ ಮಾಡಿದ್ದಾರೆ. ಕೆಲವು ಚಿಕ್ಕ ಪುಟ್ಟ ನ್ಯೂನತೆಗಳು ದೊಡ್ಡ ವ್ಯವಸ್ಥೆಯಲ್ಲಿ ಇರುತ್ತವೆ. ಅವುಗಳ ಬಗ್ಗೆ ಸಹ ದೃಷ್ಟಿ ಇರಿಸಬೇಕು. **ಇನ್‌ಶಾಅಲ್ಲಾಹ್** ಮುಂದೆ ಇನ್ನೂ ಹೆಚ್ಚು ಉತ್ತಮರಾಗುವುದು. ಅಲ್ಲಾಹನು ಎಲ್ಲ ಕಾರ್ಯಕರ್ತರಿಗೆ ಉತ್ತಮ ಪ್ರತಿಫಲ ನೀಡಲಿ. ಅವರು ಬಹಳ ಕಷ್ಟಪಟ್ಟು ಕೆಲಸ ಮಾಡಿದ್ದಾರೆ. ಪ್ರತೀಕ್ಷೆಗಿಂತ ಹೆಚ್ಚು ಜನರು ಆಗಮಿಸಿದರೂ ಅವರಿಗೆ ಹಾಸಿಗೆಯ ವ್ಯವಸ್ಥೆ ಮಾಡಲಾಯಿತು. ಮೊದಲನೆಯ ರಾತ್ರಿ ಸಮಸ್ಯೆ ತಲೆದೋರಿತ್ತು. ಮುಂದಿನ ದಿನ ಎಲ್ಲವನ್ನೂ ಸರಿಪಡಿಸಲಾಯಿತು. ಬಹಳ ಉತ್ತಮವಾಗಿ ಪರಿಹಾರ ಮಾಡಲಾಗಿತ್ತು. ಹಿಂದಿನ ವರ್ಷ ಇದ್ದ ಧ್ವನಿ ವರ್ಧಕ ವ್ಯವಸ್ಥೆಯ ಬಲಹೀನತೆ ಈ ವರ್ಷ ಅಲ್ಲಾಹನ ಅನುಗ್ರಹದಿಂದ ಇರಲಿಲ್ಲ. ನಾನು ಎಲ್ಲಾ ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಎಲ್ಲರಿಗೂ ಧನ್ಯವಾದಗಳು.

ಜಲ್ಸ ಸಾಲಾನ ನಮ್ಮವರಿಗೆ ಆಧ್ಯಾತ್ಮಿಕ ತರಬೇತಿ ಮತ್ತು ಅಭಿವೃದ್ಧಿಗೆ ಕಾರಣವಾಗುತ್ತದೆ. ಅದರ ಬಗ್ಗೆ ಪುರುಷರು ಮತ್ತು ಮಹಿಳೆಯರು ತಮ್ಮ ಪತ್ರಗಳಲ್ಲಿ ಪ್ರಸ್ತಾಪಿಸುತ್ತಾ ಇರುತ್ತಾರೆ. ಅಲ್ಲಿ ಅನ್ಯರಿಗೆ ಇಸ್ಲಾಮಿನ ನೈಜ ಚಿತ್ರ ತೋರಿಸಲ್ಪಡುತ್ತದೆ. ಬೈಅತ್‌ಗಳು ಸಹ ನಡೆಯುತ್ತವೆ. ಕೆಲವರು ಬೈಅತ್ ಮಾಡಲು ಸಿದ್ಧರಾಗಿರಲಿಲ್ಲವಾದರೂ ನನ್ನನ್ನು ಕಂಡು ಕೆಲವು ಪ್ರಶ್ನೆ ಕೇಳಿದ ನಂತರ ಬೈಅತ್ ಮಾಡಲು ಸಿದ್ಧರಾದರು. ಯಾವ್ಯಾವ ಅನುಗ್ರಹಗಳ ಬಗ್ಗೆ ಮನುಷ್ಯನು ಕೃತಜ್ಞತೆ ಅರ್ಪಿಸಲು ಸಾಧ್ಯ? ಅಲ್ಲಾಹನು ನಮಗೆ ನೀಡಿದ ಯಾವ ಅನುಗ್ರಹದ ಬಗ್ಗೆ ಕೃತಜ್ಞತೆ ಅರ್ಪಿಸಲು ನಮಗೆ ಸಾಧ್ಯವಿದೆ? ಈ ಅನುಗ್ರಹಗಳನ್ನೆಲ್ಲಾ ಕಾಪಾಡಲು ನಮ್ಮ ಜಮಾಅತಿಗೆ ಅಲ್ಲಾಹನು ಶಕ್ತಿ ನೀಡಲಿ. ಹೊಸದಾಗಿ ಬೈಅತ್ ಮಾಡಿದವರನ್ನು ಸರಿಯಾಗಿ ನಮ್ಮೊಳಗೆ ಸೇರಿಸಿಕೊಳ್ಳಲು ಸಾಧ್ಯವಾಗುವಂತಾಗಲಿ. ಜಲ್ಸದ ಅನುಗ್ರಹಗಳು ವಿಶಾಲವಾಗಿ ವ್ಯಾಪಿಸಲಿ. ಈ ಜಲ್ಸದಲ್ಲಿ ಭಾಗವಹಿಸಿದ ಎಲ್ಲರಿಗೂ ಅದರಿಂದ ಸ್ಥಿರವಾಗಿ ಲಾಭಗಳಿಸುವ ಭಾಗ್ಯ ಅಲ್ಲಾಹನು ದಯಪಾಲಿಸಲಿ. ನಮ್ಮೆಲ್ಲರನ್ನೂ ವಾಸ್ತವಿಕವಾಗಿ ಕೃತಜ್ಞತೆ ಅರ್ಪಿಸುವವರನ್ನಾಗಿ ಅಲ್ಲಾಹನು ಮಾಡಲಿ.

[ಖುತ್‌ಬದ ಕೊನೆಯಲ್ಲಿ ಹುಝೂರ್ ಖಾದಿಯಾನ್‌ನ ಮುಹಮ್ಮದ್ ದೀನ್ ಸಾಹೇಬ್ (ಮರ್‌ಹೂಮ್)ರ ಪತ್ನಿ ರಶೀದ ಬೇಗಮ್ ಸಾಹಿಬರು 1–6–2015ರಂದು ನಿಧನ ಹೊಂದಿದ ಬಗ್ಗೆ ಪ್ರಸ್ತಾಪಿಸಿ ಅವರ ಸಂಬಂಧಿಕರು ಜಮಾಅತಿಗೆ ಮಾಡಿದ ಸೇವೆಗಳ ಬಗ್ಗೆ ವಿವರಿಸಿದರು. ಜುಮುಅ ನಮಾಝ್ ನಂತರ ನಮಾಝೆ ಜನಾಝ ಗಾಯಿಬ್ ಅನುಷ್ಠಿಸುವುದಾಗಿ ಪ್ರಕಟಿಸಿದರು.]

–––––––––––––––*****–––––––––––––––


***Friday Sermon delivered by Hadrath Khaleefatul Masih Al Khamis***(atba)

*at Masjid Baithul Futhuh, London on 12-06-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P. Ibrahim | ***Typing:*** U. Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email*:** *khutuba.kannada@gmail.com*



**You can find all the Sermons archived at**: www.alislam.org/friday-sermon